ಸ್ಥಿತಿಯಲ್ಲೂ ಸಂಬಂಧಿಕರಿಗೆ ಒಂದಿಷ್ಟು ನೆಮ್ಮದಿ ಅನಿಸಿತು. ಅವರೆಲ್ಲಾ ಈ ತಂಡದ ಸೇವೆಯನ್ನ ಕೊಂಡಾಡಿದರು.

ಸಲೀಮನ ತಂದೆ 'ಸಲೀಮನ ಜಾಗಾದಾಗ ನೀನಿದ್ದೀಯಪಾ' ಅಂತ ಕಣ್ಣೀರು ತಂದ. ಗ್ಯಾರೇಜು ಸುರು ಆಗೋ ಹೊತ್ತಿಗೇ ಬಂದು ಮನಸಾ ದುಡಿದು ತನ್ನ ಉದ್ಯೋಗದ ಪ್ರಗತಿಗೆ ಮುಖ್ಯ ಕಾರಣಕರ್ತನಾದ ಸಲೀಮನಿಗೆ ತಾನು ಗೌರವ ಸಲ್ಲಿಸಿದ್ದಕ್ಕೆ ತುಸು ಸಮಾಧಾನ ಅನಿಸಿತು. ಸಲೀಮನ ಮನಿಗೆ ಕಾಲು ಕಡಿ ಕೊಟ್ಟು ಅವರಿಗೆ ಸಮಾಧಾನ ಹೇಳಿ, 'ನಿಮಗೇನೇ ಬೇಕಾದಾಗ ಯಾವುದೇ ಹೊತ್ತಿಗೆ ನನ್ನ ಕರೀರಿ, ಬರ್ತೀನಿ' ಅಂತ ಅಭಯ ಹೇಳಿದ.

ಗಣೇಶ ಅಭ್ಯಾಸ ಬಲದಿಂದ ಮುಂಜಾನೆ ಗ್ಯಾರೇಜಿನ ಶಟರ್ಸ್ ತೆಗೆದು ಕೂತಿದ್ದ. ಹಾಗೆ ದಿನಂಪ್ರತಿ ಬಂದು ಕೂಡೋದು ಅವನ ರೂಢಿ. ಜಿಟಿ ಜಿಟಿ ಮಳೆ ಇದ್ದರೂ ಮನಿಗೆ ಸಮೀಪವೇ ಇರುವ ಗ್ಯಾರೇಜಿಗೆ ಬರಲು ಅಡ್ಡಿಯೇನೂ ಇರಲಿಲ್ಲ. ಹೊರಗೆ ದಟ್ಟ ಕರಿಮೋಡ ಕವಿದಿದೆ. ತಟತಟ ಹನಿ ಉದುರುತಿವೆ. ಒಳಗೆ ಈಗ ಎಲ್ಲಾ ಖಾಲಿ ಖಾಲಿ. ಸಾಮಾನು ಇವೆ, ಬಿಲ್ಡಿಂಗು ಇದೆ. ಆದರೆ ಕೆಲಸಗಾರರೇ ಇಲ್ಲ... ಪ್ರಾಣವೇ ಇರದಿದ್ದ ಹಾಗಲ್ಲ! ಅದೂ ಸಲೀಮನಂಥವನನ್ನ ಕಳಕೊಂಡ ಮ್ಯಾಲೆ ಎಲ್ಲಾ ಶೂನ್ಯ ಅನಿಸ್ತಿದೆ. ಅವನನ್ನ ದಫನ ಮಾಡುವಾಗ ಕಣ್ಣೀರು ಘಳ ಘಳ ಉದುರಿದವು... ಅದೇ ಗ್ಯಾರೇಜು ಆರಂಭವಾದ ದಿನ. ಪ್ರಾಮಾಣಿಕ ಕೆಲಸಗಾರನ ಅಗತ್ಯ ಇತ್ತು. ಅರಸುವ ಬಳ್ಳಿ ತಾನೇ ತೊಡಕಿದಂತಾಗಿತ್ತು. ಅವನೇ ಕೆಲಸ ಕೇಳಿಕೊಂಡು ಬಂದಿದ್ದ.

'ಏನು ಅನುಭವ ಐತಿ? ಎಲ್ಲಿ ಕೆಲಸ ಮಾಡಿರುವಿ?'

ಅವ ಸುಮ್ಮನೇ ನಿಂತ.

'ಎಲ್ಲೂ ಇಲ್ಲಾ?'

ಅವ ತಡದು ತಡದು ಹೇಳಿದ, 'ಎಲ್ಲೂ ಇಲ್ಲ. ಆದ್ರ ಒಂದು ವಾರದಾಗ ಕಲಕೋತೀನಿ. ಆ ಮ್ಯಾಲ ನಿಮಗ ಬ್ಯಾಡಂದ್ರ ಬಿಡಿಸ್ರಿ.'

ಅವನ ಆತ್ಮವಿಶ್ವಾಸ, ಕೆಲಸ ಮಾಡುವ ಉಮೇದಿ ಕಂಡು ಕೆಲಸಕ್ಕ ತಗೊಂಡ. ಈ ಹತ್ತು ವರ್ಷ ಎಷ್ಟು ಮನಸಿಗೆ ಹಚಗೊಂಡು ದುಡದ ಅವ! ಅವ್ವನೂ ಅವನ ಸ್ವಭಾವ, ವಿಶ್ವಾಸ ಕಂಡು ಮೆಚಗೊಂಡಿದ್ದಳು. 'ಈ ಕೊರೊನಾ ಬಕಾಸುರ ಯಾರ್ಯಾರನ್ನ ನುಂಗತ್ತೊ, ಏನ್ ಕಥಿಯೋ! ಸಲೀಮನಂಥೋರು ಅಪರೂಪನೋ! ನಿನ್ನ ಬಲಗೈ ಬಂಟ ಆಗಿದ್ದ. ಏನ್ಮಾಡೋದು... ನೀ ಹುಶಾರು ಇರಪಾ ಮನಿಯಾಗ ಸಣ್ಣಮಕ್ಕಳು' ಅಂದಳು.

'ನೀ ಕಾಳಜಿ ಮಾಡಬ್ಯಾಡವ್ವ. ಡಾಕ್ಟರು ಹೇಳಿದಂಗ ನಾವು ಎಲ್ಲಾ ಮುಂಜಾಗ್ರತೆ ವಹಿಸ್ತೀವಿ. ನಾನು ಮಕ್ಕಳಿಂದ, ಹೇಣ್ತಿಯಿಂದ, ನಿನ್ನಿಂದ ದೂರನಾ ಇರ್ತೀನಿ. ಇದು ಕಷ್ಟದ ಕಾಲ.' ಹೀಗೆಲ್ಲ ಮನಿಯಲ್ಲಿ ಮಾತಾಡಿ ಬಂದು ಕೂತಿದ್ದ. ಹೀಂಗ ಕೂತಿರುವಂತೆ ಮರೆಯಲಾರದ ಹಳೇ ನೆನಪು ಒತ್ತಿಕೊಂಡು ಬಂತು...

ಅವ ಈ ಹಿಂದೆ ಎಂದೋ ಹೋಗಿಬಿಡಬೇಕಾಗಿತ್ತು. ಅವನ ಜೀವ ಉಳಿಸಿ ಕೆಲಸ ಕೊಟ್ಟೋರು ರಾಮದಾಸ... ನನಗ ಆಸರ ಆದ ಪುಣ್ಯಾತ್ಮರು...

ನಾನು ಪಿ.ಯು.ಸಿ.ಯಾಗ ಎರಡನೇ ಸಲಾನೂ ಇಂಗ್ಲೀಷಿನಲ್ಲಿ ನಪಾಸಾದೆನಲ್ಲ!

ಅಪ್ಪ ಒತ್ತೂ ಗಾಡಿಯಲ್ಲಿ ಕಾಯಿಪಲ್ಲೆ ಮಾರತಾ ಮನಿತನ ಸಾಗಿಸ್ತಾ ನನ್ನ ಓದಿಸ್ತಿದ್ದ.

ನನ್ನ ಮ್ಯಾಲೆ ಬಾಳಂದ್ರ ಬಾಳ ವಿಶ್ವಾಸ ಇಟ್ಟಿದ್ದ. ಇಬ್ಬರು ಅಕ್ಕಂದಿರನ್ನ ಮದಿವಿ ಮಾಡಿಕೊಟ್ಟಿದ್ದ. ಅದಕ್ಕ ಸಾಲಾನೂ ಮಾಡಿದ್ದ. ಮಗ ನಾಳೆ ನೌಕರಿ ಮಾಡಿ ತನ್ನೆಲ್ಲಾ ಕಷ್ಟ ಪರಿಹರಿಸ್ತಾನ ಅಂತ ಅವ್ವನ ಮುಂದ ಹೇಳೋದು ಕೇಳಿಕೊಂಡಿದ್ದೆ. ನಾನು ಓದಲಿಕ್ಕಂತ ಧಾರವಾಡದಲ್ಲಿ ರೂಮು ಹಿಡ್ಕೊಂಡು ಇದ್ದಾಗ ನಾ ನಾಲಾಯಕ ಅದೀನಿ ಅನಿಸಿ ಒಂದು ನಿರ್ಧಾರಕ್ಕ ಬಂದೆ. ಹಳವಂಡಗಳನ್ನ ಹೊತ್ಕೊಂಡು ಮುಂಜಾನಿ ಒಂಬತ್ತರವರೆಗೆ ಮಲಗಿರ್ತಿದ್ದ. ನಾನು ಆ ರವಿವಾರ ಚುಮು ಚುಮು ಬೆಳಗು ಹರಿವ ಹೊತ್ತಿಗೇ ಎದ್ದು ಹೊಂಟೆ. ದುಡು ದುಡು ಹೆಜ್ಜಿ ಹಾಕತಾ ಗಿಡಗಂಟಿ ದಾಟಿ ರೈಲು ಹಳಿಯ ಕಾಲುದಾರಿಗೆ ಬಂದೆ. ಹಿಂದ ಮುಂದ ನೋಡಿದೆ. ಯಾರೂ ಇರಲಿಲ್ಲ. ರೈಲು ತುಸು ದೂರದಲ್ಲಿ ಸೀಟಿ ಹಾಕತಾ ಅರ್ಭಟಿಸ್ತಾ ಬರತೊಡಗಿತು. ಹಳಿಗಳ ನಡೂವ ಬಂದು ಕಣ್ಮುಚ್ಚಿ ಗಪ್ಪನೆ ಕೂತುಬಿಟ್ಟೆ. ಒಮ್ಮೆಲೆ ಯಾರೋ ಎಳೆದೊಗೆದರು. ರೈಲು ಹಾದು ಹೋಯಿತು. ಎಳೆದೊಗೆದ ವ್ಯಕ್ತಿ, 'ಯಾಕೊ ತಮ್ಮಾ, ಜೀವ ಬ್ಯಾಸರ ಆಗೇತೇನು?' ಅಂತ ಕೇಳಿದ. ಕಣ್ಣೀರು ಬಳ ಬಳ ಇಳೀತಿದ್ದವು.

'ಈಟು ಸಣ್ಣ ವಯಸ್ಸಿನಾಗ ಜೀವ ಕಳಕೊಳ್ಳೋ